# ಸಂಕಟದ ಕಡಲೊಳು ಗೆಲುವಿನ ಕಿರುಹಣತೆ



ಪುನೀತ್ ರಾಜ್‌ಕುಮಾರ್ ಅಗಲಿಕೆಯ ನೋವಿನಿಂದ ತೋಯ್ದ 2022, ಸಿನಿಮಾಗಳ ಯಶಸ್ಸಿನ ದೃಷ್ಟಿಯಿಂದ ಕನ್ನಡ ಚಿತ್ರರಂಗಕ್ಕೆ ಚೇತೋಹಾರಿ ವರ್ಷ. ಗೆದ್ದ ಸಿನಿಮಾಗಳ ಸಂಖ್ಯೆ ಬೆರಳೆಣಿಕೆಯಷ್ಟೇ ಇದ್ದರೂ, ಆ ಗೆಲುವಿನ ಪರಿಣಾಮ ದೊಡ್ಡದು. ‘ಜೇಮ್ಸ್’, ‘ಕೆಜಿಎಫ್ ಚಾಪ್ಟರ್ 2’, ‘ಕಾಂತಾರ’ ಸಿನಿಮಾಗಳು ಹಾಗೂ ‘ಗಂಧದಗುಡಿ’ ಡಾಕ್ಯುಡ್ರಾಮಾದ ಗೆಲುವು ನಾಡಿನಾಚೆಗೂ ಕನ್ನಡ ಸಿನಿಮಾಗಳ ಕಂಪು ಬೀರಿದೆ. ‘ವಿಕ್ರಾಂತ್ ರೋಣ’, ‘777 ಚಾರ್ಲಿ’ ಸಿನಿಮಾಗಳ ಯಶಸ್ಸು ಕನ್ನಡ ಚಿತ್ರೋದ್ಯಮವನ್ನು ಮತ್ತಷ್ಟು ಬಲಪಡಿಸಿದೆ. ಇತ್ತೀಚಿನ ವರ್ಷಗಳಲ್ಲಿ ಈ ಪ್ರಮಾಣದ ಲವಲವಿಕೆಯನ್ನು ‘ಚಂದನವನ’ ಕಂಡಿರಲಿಲ್ಲ. ಕೊರೊನಾ ಹೊಡೆತದಿಂದ ತತ್ತರಿಸಿದ್ದ ಚಿತ್ರೋದ್ಯಮ ಒಮ್ಮೆಗೇ ಮೈಕೊಡವಿ ಎದ್ದಿದೆ. ಈ ಯಶಸ್ಸು ಕನ್ನಡ ಸಿನಿಮಾ ನಿರ್ಮಾತೃಗಳ ಹೊಣೆಗಾರಿಕೆಯನ್ನೂ ಹೆಚ್ಚಿಸಿದೆ.

■ **ರಘುನಾಥ ಚ.ಹ.**